ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್.ಸಿ ರವರ ನ್ಯಾಯಾಲಯ, ಮಳವಳ್ಳಿ

ಸಿಸಿ ನಂಃ **264/2025**

ಪಿರ್ಯಾದಿ : ಶ್ರೀ ನಾಗೇಂದ್ರ‍ುಳಿ ಬಿನ್ ಬೋರೇಗೌಡ
ವಯಸ್ಸು: 35 ವರುಷ,
ವಾಸ: ಹೊಂಬೇಗೌಡನದೊಡ್ಡಿ ಗ್ರಾಮ,
ನೆಲಮಾಕನಹಳ್ಳಿ ಅಂಚೆ, ಮಳವಳ್ಳಿ ತಾಲ್ಲೂಕು,
ಮಂಡ್ಯ ಜಿಲ್ಲೆ.

- ವಿರುದ್ಧ -

ಆರೋಪಿ : ಶ್ರೀ ಜಿ.ಎಸ್.ಶಶಿಕುಮಾರ (ಕೆಎಸ್ಆರ್‌ಟಿಸಿ)
ಬಿನ್ ಶಿವಣ್ಣ
ವಯಸ್ಸು: 40 ವರುಷ,
ವಾಸ: ಹಲಗೂರು ರಸ್ತೆ,
ಕೆ.ಎಂ.ದೊಡ್ಡಿ (ಭಾರತೀನಗರ) ಗ್ರಾಮ,
ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

## ಆರೋಪಣೆ

ಆರೋಪಿಯಾದ ನೀವು ಪಿರ್ಯಾದುದಾರರಿಗೆ ಬಹಳ ಪರಿಚಯಸ್ಥರಾಗಿದ್ದು, ಆದ್ದರಿಂದ ದಿನಾಂಕ **12.09.2013** ರಂದು ನೀವು ಪಿರ್ಯಾದುದಾರರಿಂದ ರೂ.**50,000/-** ಗಳನ್ನು ಸಾಲವಾಗಿ ಪಡೆದು, ಅದನ್ನು ದಿನಾಂಕ **12.12.2013** ಒಳಗಾಗಿ ಹಿಂದುರುಗಿಸುವುದಾಗಿ ಭರವಸೆ ನೀಡಿರುತ್ತೀರಿ. ಸದರಿ ಅವಧಿ ಕಳೆದ ನಂತರ ಪಿರ್ಯಾದುದಾರರು ಆರೋಪಿಯಾದ ನಿಮ್ಮನ್ನು ಭೇಟಿ ಮಾಡಿ ಸಾಲದ ಮೊತ್ತವನ್ನು ವಾಪಸ್ಸು ನೀಡುವಂತೆ ಕೇಳಿದಾಗ, ಆರೋಪಿಯಾದ ನೀವು ದಿನಾಂಕ **14.12.2013**ರ ದಿನಾಂಕವನ್ನು ನಮೂದಿಸಿ ಭಾರತೀನಗರ ಶಾಖೆಯ ವಿಶ್ವೇಶ್ವರಯ್ಯ ಗ್ರಾಮೀಣ (ಕಾವೇರಿ ಗ್ರಾಮೀಣ ಬ್ಯಾಂಕ್) ಬ್ಯಾಂಕಿನ **739108** ನಂಬರಿನ ಚೆಕ್ಕನ್ನು ಪಿರ್ಯಾದುದಾರರಿಗೆ ನೀಡಿ ಅದನ್ನು ಬ್ಯಾಂಕಿಗೆ ಹಾಜರುಪಡಿಸಿ ಹಣ ಪಡೆಯುವಂತೆ ಹೇಳಿರುತ್ತೀರಿ, ಆದರಂತೆ ದಿನಾಂಕ **14.12.2013** ರಂದು ಸದರಿ ಚೆಕ್ಕನ್ನು ಪಿರ್ಯಾದುದಾರರು ಮಳವಳ್ಳಿ ಶಾಖೆಯ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕಿಗೆ ಹಾಜರುಪಡಿಸಿದಾಗ, ಆರೋಪಿಯಾದ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ

ಇಲ್ಲ ಎಂದು ದಿನಾಂಕ **20.12.2013** ರಂದು ಬ್ಯಾಂಕಿನವರು ಹಿಂಬರಹ ನೀಡಿರುತ್ತಾರೆ. ದಿನಾಂಕ **20.01.2014** ರಂದು ಪಿರ್ಯಾದುದಾರರು ಆರೋಪಿಯಾದ ನಿಮಗೆ ತಿಳುವಳಿಕೆ ನೋಟೀಸನ್ನು ಕಳುಹಿಸಿದ್ದು ಅದನ್ನು ನೀವು ಸ್ವೀಕರಿಸಿರುವುದಿಲ್ಲ. ಆರೋಪಿಯಾದ ನೀವು ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಪಿರ್ಯಾದುದಾರರಿಗೆ ಚೆಕ್ಕನ್ನು ನೀಡಿರುತ್ತೀರಿ, ಆ ಮೂಲಕ ಆರೋಪಿಯಾದ ನೀವು ಕಲಂ **138** ರ ಸ್ವಾಮಿತ್ಯ ವರ್ಗಾವಣೆ ಕಾಯ್ದೆಯಂತೆ ಅಪರಾಧ ಎಸಗಿರುತ್ತೀರಿ ಎಂದು ನಿಮ್ಮ ವಿರುದ್ದ ಆಪಾದಿಸಿದೆ.

ಪ್ರಶ್ನೆ.1. ಮೇಲೆ ಓದಿ ಹೇಳಿ ವಿವರಿಸಿದ ಆಪಾದನೆಯು ಅರ್ಥವಾಯಿತೇ**?**

<u>ಉತ್ತರಃ</u>

ಪ್ರಶ್ನೆ.2. ಆಪಾದನೆಯನ್ನು ಒಪ್ಪಿಕೊಳ್ಳುತ್ತಿರೋ ಅಥವಾ ವಿಚಾರಣೆ ಬಯಸುತ್ತೀರಾ **?**

<u>ಉತ್ತರಃ</u>

ಪ್ರಶ್ನೆ.3. ಪ್ರಶ್ನಿತ ಚೆಕ್ಕು ನಿಮ್ಮ ಬ್ಯಾಂಕ್ ಖಾತೆಗೆ ಸಂಬಂದಿಸಿರುತ್ತದೆಯೇ **?**

<u>ಉತ್ತರಃ</u>

ಪ್ರಶ್ನೆ.4. ಪ್ರಶ್ನಿತ ಚೆಕ್ಕಿನಲ್ಲಿ ಇರುವ ಸಹಿ ನಿಮ್ಮದಾಗಿರುತ್ತದೆಯೇ **?**

<u>ಉತ್ತರಃ</u>

ಪ್ರಶ್ನೆ.5. ಪ್ರಶ್ನಿತ ಚೆಕ್ಕನ್ನು ನೀವು ಪಿರ್ಯಾದುದಾರರಿಗೆ ನೀಡಿರುತ್ತೀರಿ **?**

<u>ಉತ್ತರಃ</u>

ಪ್ರಶ್ನೆ.6. ಪ್ರಶ್ನಿತ ಚೆಕ್ಕನ್ನು ನೀಡುವ ಕಾಲಕ್ಕೆ ಪಿರ್ಯಾದುದಾರರಿಗೆ ಹಣ ನೀಡುವ ಬಾದ್ಯತೆಯನ್ನು ನೀವು ಹೊಂದಿರುತ್ತೀರಿ **?**

<u>ಉತ್ತರಃ</u>

ಪ್ರಶ್ನೆ.7. ನೀವು ನಿಮ್ಮ ಬಾದ್ಯತೆಯನ್ನು ಅಲ್ಲಗಳೆದರೆ ನಿಮ್ಮ ಪ್ರತಿರಕ್ಷೆ ಏನಾಗಿರುತ್ತದೆ **?**

A) Security cheque only ?

B) Loan repaid already ?

C) Cheque altered/misused ?

D) Other (Specify) ?

(ಮೇಲ್ಕಂಡ ಆರೋಪಣೆಯನ್ನು ಆರೋಪಿಗೆ ತಿಳಿದ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ ಹೇಳಿ ಆರೋಪಿ ಕೊಟ್ಟ ಉತ್ತರವನ್ನು ಯಥಾವತ್ತಾಗಿ ದಾಖಲಿಸಿ ಸರಿಯಾಗಿರುತ್ತದೆಂದು ಈ ಮೂಲಕ ದೃಢೀಕರಿಸುತ್ತೇನೆ.)

ದಿನಾಂಕ : **27.03.2026**

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಮಳವಳ್ಳಿ.